ತೋರಗಲ್ಲ ಉಮೇಶ, ರಾಮದುರ್ಗ
*ನನ್ನ ಗೆಳತಿ ಲಂಚ ತಿನ್ನದಿದ್ದರೆ ನನ್ನನ್ನು ಮದುವೆ ಆಗುವುದಿಲ್ಲವಂತೆ, ದಾರಿ ತೋರಿಸಿ...?*



ದಾರಿ ತೋರಿಸಬೇಕಾದ್ದು ನಿಮಗಲ್ಲ, ಗೆಳತಿಗೆ–ಹೊರಕ್ಕೆ!

ವಿ. ಹಮೀದ್, ವಿಟ್ಲ
*ಗಂಡ ಹೆಂಡತಿ ಇಬ್ಬರೂ ಚುನಾವಣೆಗೆ ಸ್ಪರ್ಧಿಸಿದರೆ ಯಾರು ಗೆಲ್ಲುವುದು?*
ಗಂಡನಿಗೆ ಗೆಲುವು; ಹೆಂಡತಿಗೆ ಸರ್ವಾಧಿಕಾರ!

ಚೈತ್ರ ಕೆ.ಎನ್. ತುಮಕೂರು
*ನೀವು ನಿಜವಾಗಿಯೂ ಓದುಗರು ಬರೆದ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುವಿರಾ?*
ನಿಜವಾಗಿಯೂ ಓದುಗರು ಬರೆದ ಪ್ರಶ್ನೆಯೇ ಆಗಬೇಕೆಂದಿಲ್ಲ, ಬೇರೆಯವರ ಕೈಯಲ್ಲಿ ಬರೆಸಿದರೂ ಆದೀತು!

ಬಸವನಗೌಡ, ಹೆಬ್ಬಳಗೆರೆ
*ಹಲವು ಶಕ್ತಿದೇವತೆಗಳಿರುವ ನಮ್ಮ ರಾಜ್ಯವೇಕೆ ಇನ್ನೂ ಮಹಿಳಾ ಮುಖ್ಯಮಂತ್ರಿಯನ್ನು ಕಂಡಿಲ್ಲ?*
ತಾಯಂದಿರಲ್ಲವೇ... ಗಂಡುಮಕ್ಕಳ ಮೇಲೆಯೇ ಹೆಚ್ಚು ವ್ಯಾಮೋಹ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಪ್ರೀತಿಯ ಬಲೆಗೂ, ಲೋಕಾಯುಕ್ತರ ಬಲೆಗೂ ಏನು ವ್ಯತ್ಯಾಸ?*



ಒಂದಕ್ಕೆ ಅಂತಃಕರಣ ಕಾರಣ, ಮತ್ತೊಂದಕ್ಕೆ ಅಂತಃಕಲಹ!

ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ
*ಒಂದನ್ನು ಪಡೆಯಬೇಕಾದರೆ ಮತ್ತೊಂದನ್ನು ಕಳೆದುಕೊಳ್ಳಲೇಬೇಕಾ ಸಾರ್?*
ನಿಜ. ಸೊಸೆಯನ್ನು ಪಡೆದೆ, ಮಗನನ್ನು ಕಳೆದುಕೊಂಡೆ ಎಂದಳಾ ಅತ್ತೆ!

ಮೊಳಕಾಲ್ಮೂರು ಸುರೇಶ್, ಬಳ್ಳಾರಿ
*ನಿನ್ನ ಜೊತೆ ನರಕಕ್ಕಾದರೂ ಬರ್ತೀನಿ ಎಂದು ಹೇಳುವ ಪ್ರಿಯತಮನಿಗೆ ಪ್ರೇಯಸಿ ಹೇಳುವ ಉತ್ತರ?*
ಸರಿ ಹಾಗಾದ್ರೆ, ಯಾವಾಗ ಇಟ್ಕೊಳ್ಳೋಣ ಮದುವೆ?

ಹಾಡ್ಯ ಜಯಾನಂದ, ಮೈಸೂರು
*ಮಾನವ ಜನ್ಮ ದೊಡ್ಡದು ಎಂದರು ದಾಸರು. ಇದರಲ್ಲಿ ರಾಜಕಾರಣಿಗಳೂ ಸೇರಿದ್ದಾರೆಯೇ?*
ಊಸರವಳ್ಳಿ, ನರಿ, ಗೂಬೆ, ಕಪ್ಪೆಗಳು ಮಾನವರ ಪಟ್ಟಿಗೆ ಸೇರುವುದಿಲ್ಲ ಸಾರ್!

ಗೀತಾ ಬರ್ಲ, ಬೆಂಗಳೂರು
*ಸುಂದರಿಯಾಗಿರುವ ಪತ್ನಿ ಪತಿಗೆ ವೈರಿಯಂತೆ, ಯಾಕೆ?*
ಆಭರಣಗಳು, ಮೇಕಪ್ ಮತ್ತು ಡ್ರೆಸ್‌ಗಳಿಗೆ ಬಹಳ ಖರ್ಚು ಮಾಡಿಸುವುದರಿಂದ!

ಸಿ. ಲೋಕೇಶ್, ಮಳವಳ್ಳಿ
*ದ್ರೌಪದಿಯ ಐದು ಜನ ಗಂಡಂದಿರಲ್ಲಿ ಒಬ್ಬ ತೀರಿಕೊಂಡರೆ ಅವಳು ವಿಧವೆಯೋ, ಮುತ್ತೈದೆಯೋ?*
ಮುತ್ತೈದೆಯೇ; ಅವಳ ಪತಿಯರ ಗಂಡಾಂಶ 20%ನಿಂದ 25%ಗೆ ಏರುವುದಷ್ಟೆ!

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ
*ಪರಲೋಕಕ್ಕೆ ಎಲ್ಲಿ ಟಿಕೆಟ್ ಸಿಗುತ್ತದೆ?*
ಹತ್ತಿರದ ಹೆದ್ದಾರಿಯನ್ನು ಸಂಪರ್ಕಿಸಿ!

ಅಶ್ವಿನಿ ವಿ. ಹೆಗಡೆ, ಬೈರುಂಬೆ
*ಮನುಷ್ಯರಂತೆ ಪ್ರಾಣಿಗಳೇಕೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ?*
ಅವು ಪರೀಕ್ಷೆಗಳು, ಪ್ರೀತಿ, ಸಾಲಗಳಲ್ಲಿ ಸಿಲುಕುವುದಿಲ್ಲವಲ್ಲ!

ಭಾರತಿ ಮಾನಗೆ, ಹೊನ್ನಾವರ
*ಕಾಡಿದ್ದರೆ ನಾಡು, ಕಾಡು ಕಡಿದರೆ...?*
ಎಲ್ಲಾ ಸವಲತ್ತುಗಳೂ ಔಟ್ ಆಗಿರುವ ಲೇಔಟು!

ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು
*ಪಕ್ಕದಲ್ಲಿ ಪತ್ನಿ ಇದ್ದರೂ ಪರಸ್ತ್ರೀಯನ್ನು ಬಯಸುವುದೇಕೆ?*
ಇರುವುದೆಲ್ಲವ ಬಿಟ್ಟು ಇರದುದರ ಎಡೆಗೆ ತುಡಿಯುವುದೇ ಜೀವನ ಎಂದು ಅಡಿಗರೇ ಹೇಳಿದ್ದಾರೆ!

## ಬಹುಮಾನಿತ ಪ್ರಶ್ನೆ

ಹೆಚ್.ಆರ್. ಕಡಿವಾಲ, ಬದಾಮಿ
*ಇತ್ತೀಚೆಗೆ ಅಂತರ್ಜಾತಿ ವಿವಾಹ ಹೆಚ್ಚಾಗುತ್ತಿದೆ, ಏಕೆ?*
ಹಾಗೇನಿಲ್ಲವಲ್ಲಾ.... ಎಲ್ಲಾ ವಿವಾಹಗಳೂ ಮನುಷ್ಯಜಾತಿಯಲ್ಲಿಯೇ ನಡೆಯುತ್ತಿವೆ!

ಎಂ.ಜಿ.ಶಿವರಾಂ, ಬೆಂಗಳೂರು
*ಹೊಲಸು ನಡೆಯ, ಕೊಳಕು ನುಡಿಯ ವಿದ್ಯಾವಂತರಿಗೆ ನಿಮ್ಮ ಬುದ್ಧಿವಾದವೇನು?*
ಪೊಲಿಟಿಕ್ಸ್ ಸೇರಿಬಿಡಿ, ಮಂತ್ರಿಯಾಗಬಹುದು!

ಗಾನಾಸುಮಾ, ಪಾಂಡವಪುರ
*ಸರ್ವಸಂಗ ಪರಿತ್ಯಾಗಿಗಳಿಗೇಕೆ ಸರ್ಕಾರದ ದುಡ್ಡು ಸ್ವಾಮಿ?*
ಛೆ! ಅವರು ಅಂತಹ ಸಂಕುಚಿತ ಮನೋಭಾವ ಹೊಂದಿರುವುದಿಲ್ಲ; ಸರ್ಕಾರೇತರ ಹಣವಾದರೂ ಓಕೆ!

ಕಂಡಕ್ಟರ್ ರಾಜು, ಗುಬ್ಬಿ
*ಅವಳು ನನ್ನನ್ನು ಮೋಡ ಮುಚ್ಚಿದ ಚಂದ್ರನಿಗೆ ಹೋಲಿಸುತ್ತಾಳಲ್ಲಾ...?*



ತಿಳಿಯಿತು ಬಿಡಿ; ನಿಮ್ಮ ಮುಖದಲ್ಲಿ ಬಹಳ ಕಲೆಗಳಿವೆ, ಅವನ್ನು ನೀವು ದಪ್ಪ ಮೇಕಪ್‌ನಲ್ಲಿ ಮುಚ್ಚಿಕೊಳ್ಳುತ್ತೀರಿ!

ಓಂಕುಮಾರ್ ಬಿ. ಸ್ವಾಮಿ, ಬೀದರ್
*ನಾವು ನಿಮಗೆ ಪ್ರಶ್ನೆಗಳನ್ನು ಕೇಳುವುದರಿಂದ ನಮಗೇನು ಲಾಭ?*
ಪೋಸ್ಟ್ ಕಾರ್ಡ್ ತರಲು ಪೋಸ್ಟಾಫೀಸಿಗೆ ನಡೆದು ಹೋಗುವುದರಿಂದ ಆರೋಗ್ಯದಲ್ಲಿ ಸುಧಾರಣೆ!

ಮನೋರಮಾ ಪ್ರಭು, ಹೊನ್ನಾವರ
*ಹೆಂಡತಿ ಗಂಡನ ಹೆಸರನ್ನು ಹೇಳಬಾರದು ಎನ್ನುತ್ತಾರೆ, ಏಕೆ?*
ಅಂದಿನ ಅವಿದ್ಯಾವಂತೆ ಉಚ್ಚಾರಣೆ ಬಾರದೆ ಸತ್ಯನಾರಾಯಣ ಎಂದೋ, ಒಂಟೇಶ ಎಂದೋ ಹೇಳಿಬಿಟ್ಟರೆ ಆಭಾಸವಾದೀತೆಂದು!

■ ರಾಮ್